ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) :-

1062 (517) ಮಾನ್ಯ ವಸತಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

ಅ) ಬೀಳಗಿ ತಾಲ್ಲೂಕಿನಲ್ಲಿ 2006-07ನೇ ಸಾಲಿನಲ್ಲಿ ಅಂಬೇಡ್ಕರ್, ಆಶ್ರಯ ಹಾಗೂ ಇಂದಿರಾ ಆವಾಸ ಯೋಜನೆಗಳಲ್ಲಿ ಕಡು ಬಡವರಿಗೆ ಮನೆಗಳನ್ನು ನಿರ್ಮಾಣ ಮಾಡಲು ಹಾಕಿಕೊಂಡಿದ್ದ ಗುರಿ ಏನು;

ಆ) ಈ ಗುರಿಯ ಪ್ರಗತಿ ಯಾವ ಹಂತದಲ್ಲಿದೆ;

ಇ) ಈ ಗುರಿ ಸಾಧನೆಗೆ ಇರುವ ಅಡೆತಡೆ ನಿವಾರಣೆಗೆ ಕೈಗೊಂಡ ಕ್ರಮಗಳೇನು;

ಈ) ಈ ಗುರಿ ಮುಂದಿನ ವರ್ಷದ ವಸತಿ ಯೋಜನೆಗೆ ಸಮರ್ಪಕ ಅವಕಾಶವಾಗಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ (ಮಾನ್ಯ ವಸತಿ ಸಚಿವರು) :-

ಅ) ಬೀಳಗಿ ತಾಲ್ಲೂಕಿಗೆ 2006-07ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಪ್ರತಿ ಗ್ರಾಮ ಪಂಚಾಯಿತಿಗೆ 60 ರಂತೆ 2001 ರ ಜನಗಣತಿಯ ಪ್ರಕಾರ 10000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತಿಗೆ ಹೆಚ್ಚುವರಿಯಾಗಿ 60 ಮನೆಗಳಂತೆ ಒಟ್ಟು 1200 ಮನೆಗಳನ್ನು ನೀಡಲಾಗಿರುತ್ತದೆ. ಇಂದಿರಾ ಆವಾಸ ಯೋಜನೆಯಲ್ಲಿ 343 ಮನೆಗಳನ್ನು ಬೀಳಗಿ ತಾಲ್ಲೂಕಿಗೆ ನೀಡಲಾಗಿರುತ್ತದೆ.

ಗ್ರಾಮೀಣ ಅಂಬೇಡ್ಕರ್ ಯೋಜನೆಯಡಿಯಲ್ಲಿ 2006-07ನೇ ಸಾಲಿಗೆ ಗುರಿಯನ್ನು ನೀಡಿರುವುದಿಲ್ಲ.

ಆ) ಮೇಲೆ ತಿಳಿಸಿರುವ ಗುರಿಗೆ ಅನುಗುಣವಾಗಿ ಜೂನ್ 2007ರ ಅಂತ್ಯದವರೆಗಿನ ಪ್ರಗತಿಯ ವಿವರ ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ಯೋಜನೆ	ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ	2006-07ನೇ ಸಾಲಿನಲ್ಲಿ ಪ್ರಗತಿಯ ವಿವಿಧ ಹಂತದಲ್ಲಿರುವ ಮನೆಗಳು				ಪ್ರಾರಂಭಿಸ ಬೇಕಾದ ಮನೆಗಳು
			ಪೂರ್ಣಗೊಂಡ ಮನೆಗಳು	ಪಾಯ	ಗೋಡೆ	ಛಾವಣಿ	
1	ಗ್ರಾಮೀಣ ಆಶ್ರಯ	1079	0	171	29	1	878
2	ಗ್ರಾಮೀಣ ಅಂಬೇಡ್ಕರ್	0	2006-07ನೇ ಸಾಲಿಗೆ ಗುರಿ ನಿಗದಿಪಡಿಸಿರುವುದಿಲ್ಲ				
3	ಐಎವೈ	313	178	38	10	7	110
	ಒಟ್ಟು	1422	178	209	39	9	988

ಇ) ಗುರಿಯನ್ನು ಸಾಧಿಸಲು ಯಾವುದೇ ಅಡೆತಡೆಗಳು ಇರುವುದಿಲ್ಲ.

ಈ) ಗುರಿಗೆ ಅನುಗುಣವಾಗಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಸಾಧಿಸಿದ ಪ್ರಗತಿಗೆ ಅನುಗುಣವಾಗಿ ಪ್ರತಿವಾರ ನೇರವಾಗಿ 'Internet Banking' ಮೂಲಕ ಗ್ರಾಮ ಪಂಚಾಯತಿ ಮನೆಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ. ಈ ಎಲ್ಲಾ ಮನೆಗಳನ್ನು ಈ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) :-

1063 (518) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

1) ಬೀಳಗಿ ಮತಕ್ಷೇತ್ರದಲ್ಲಿ ಈಗಿರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

2) 2006-07, 2007-08ರಲ್ಲಿ ಹೊಸದಾಗಿ ಮಂಜೂರು ಮಾಡಿದ ಪ್ರೌಢಶಾಲೆಗಳೆಷ್ಟು;

3) ಪ್ರೌಢಶಾಲೆ ಮಂಜೂರು ನೀಡಿಕೆಯಲ್ಲಿ ಜನ ಸಂಖ್ಯೆ/ಗ್ರಾಮ ಪಂಚಾಯಿತಿಗೊಂದು/ಪ್ರೌಢಶಾಲೆಯಿಂದ ಪ್ರೌಢಶಾಲೆಗೆ ಇರುವ ದೂರ/ಪುನರ್ವಸತಿ ಕೇಂದ್ರ ಇವುಗಳ ಅಂತರವನ್ನು ಮಾನದಂಡವಾಗಿ ಪರಿಗಣಿಸುವುದಿಲ್ಲವೆ;

4) 10 ಸಾವಿರ ಜನ ಸಂಖ್ಯೆ ಇರುವ ಸಮೀಪದಲ್ಲಿ ಸರ್ಕಾರದ ಪ್ರೌಢಶಾಲೆ ಇಲ್ಲದಿರುವ ಜಮಖಂಡಿ ತಾಲ್ಲೂಕಿನ ಬೀಳಗಿ ಮತಕ್ಷೇತ್ರಕ್ಕೊಳಪಟ್ಟ **"ಕೊಣ್ಣೂರ"** ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :-

1) 22 ಪ್ರೌಢಶಾಲೆಗಳಿವೆ.

2) ರಾಜ್ಯದಲ್ಲಿ 2006-07ರಲ್ಲಿ 485 ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಿದೆ. ರಾಜ್ಯದಲ್ಲಿ 2007-08ರಲ್ಲಿ 199 ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಿದೆ.

3) ಆಯವ್ಯಯದಲ್ಲಿ ಲಭ್ಯವಿರುವ ಅವಕಾಶದಂತೆ ಹಾಗೂ ಸ್ಥಳೀಯ ಅಗತ್ಯತೆಗಳನ್ನು ಪರಿಗಣಿಸಿ ಹಂತ ಹಂತವಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.